ವಿಷಯ : ಕರ್ನಾಟಕ ಲೋಕಸೇವಾ ಆಯೋಗ ಅಧ್ಯಕ್ಷರ ನೇಮಕಾತಿ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 445 (608)

ಶ್ರೀ. ವಾಟಾಳ್ ನಾಗರಾಜ್ (ಚಾಮರಾಜನಗರ) :- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಲೋಕಸೇವಾ ಆಯೋಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡಲು ನೀತಿ ನಿಯಮಗಳು ಇವೆಯೇ : ಅವುಗಳು ಯಾವುವು ?

ಶ್ರೀ. ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು) :-

ಅ) ಭಾರತ ಸಂವಿಧಾನದ ಅನುಚ್ಛೇದ 316 ರ ಅಡಿಯಲ್ಲಿರುವ 1ನೇ ಖಂಡದಲ್ಲಿ ವಿಹಿತವಾಗಿರುವ ಅಧಿಕಾರಗಳನ್ನು ಉಪಯೋಗಿಸಿ ರಾಜ್ಯಪಾಲರು ಲೋಕಸೇವಾ ಆಯೋಗದ ಅಧ್ಯಕ್ಷರನ್ನು ನೇಮಿಸುವರು.

ವಿಷಯ : ಬೆಳಗಾಂ ತಾಲ್ಲೂಕಿನಲ್ಲಿ ಮಂಜೂರಾತಿ ಪಡೆದ ಎನ್. ಆರ್. ಡಬ್ಲ್ಯೂ. ಎಸ್. ಮತ್ತು ಕಿರು ನೀರಾವರಿ ಯೋಜನೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 448 (682)

ಶ್ರೀ ಬಿ.ಪಿ. ಪಾಟೀಲ್ (ಉಚ್ಚಗಾಂ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಬೆಳಗಾವಿ ಜಿಲ್ಲೆಯ ಬೆಳಗಾಂ ತಾಲ್ಲೂಕಿನಲ್ಲಿ ಮಂಜೂರಾತಿ ಪಡೆದ ಎನ್. ಆರ್. ಡಬ್ಲ್ಯೂ. ಎಸ್. ಮತ್ತು ಕಿರುನೀರು ಸರಬರಾಜು ಯೋಜನೆಗಳು ಯಾವುವು ?

2. ಎಷ್ಟು ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ ?

3. ಪೂರ್ಣಗೊಳಿಸಬೇಕಾಗಿರುವ ಯೋಜನೆಗಳು ಎಷ್ಟು ?

4. ಪೂರ್ಣಗೊಳಿಸದೇ ಇರುವ ಯೋಜನೆಗಳನ್ನು ಸರ್ಕಾರವು ಎಂದು ಪ್ರಾರಂಭಿಸುವುದು?

ಶ್ರೀ. ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :-

1. ಬೆಳಗಾಂ ತಾಲ್ಲೂಕಿನಲ್ಲಿ ಮಂಜೂರಾತಿ ಪಡೆದ ಎಸ್. ಆರ್. ಡಬ್ಲ್ಯೂ. ಎಸ್. ಮತ್ತು ಕಿರುನೀರು ಸರಬರಾಜು ಯೋಜನೆಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

ಎನ್. ಆರ್. ಡಬ್ಲ್ಯೂ. ಎಸ್.	- 9
ಕಿರುನೀರು ಸರಬರಾಜು ಯೋಜನೆಗಳು	-10
ಒಟ್ಟು	19